## <u>ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.</u>

**OS No**.46/2012

**PW**:2

**ದಿನಾಂಕ 28.10.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ.ಎಸ್.ಜೆ.ಡಬ್ಲ್ಯೂ ವಕೀಲರಿಂದ:</u>**

ದಿಃ24.04.2008 ರಂದು ವಾದಿಯ ಮದುವೆಯು ಮಹಾದೇವ ಬಸನಗೌಡ ಪಾಟೀಲ ಇವರ ಜೊತೆ ಮಹಾದೇವ ಇವರ ಮನೆಯ ಮುಂದೆ ಮದುವೆಯಾಗಿರುತ್ತದೆ. ದಿಃ24.04.2008 ರಂದು  ವಾದಿಯ ಮದುವೆಯು ಮಹಾದೇವ ಬಸನಗೌಡ ಪಾಟೀಲ ಇವರ ಜೊತೆ ಮಹಾದೇವ ಇವರ ಮನೆಯ ಮುಂದೆ ಆಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮಹಾದೇವ ಇವರು ಯಾವಾಗ ಮರಣ ಹೊಂದಿರುತ್ತಾರೆ ಎಂದು ನನಗೆ ದಿನಾಂಕ ಗೊತ್ತಿಲ್ಲ. ನನ್ನ ಅಳಿಯ ತೀರಿಕೊಂಡ 2-3 ವರ್ಷದ ನಂತರ ವಾದಿಯನ್ನು 4 ನೇ ಪ್ರತಿವಾದಿ ಮತ್ತು ಆಕೆಯ ಹೆಣ್ಣು ಮಕ್ಕಳು ಹೊರಗೆ ಹಾಕಿರುತ್ತಾರೆ. ವಾದಿಯು ಸದರಿ ಮಹಾದೇವ ಇವರನ್ನು ಮದುವೆಯಾಗಿರುವುದಿಲ್ಲ ಮತ್ತು ಎಂದೂ ಆತನ ಮನೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ HIV ರೋಗ ಲಕ್ಷಣಗಳು ಇರುತ್ತದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ವಾದಿಯನ್ನು ಬಿಳಗಿ ಗ್ರಾಮದ ಶ್ರೀಶೈಲ ಇವರಿಗೆ ಮದುವೆ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ವಾದಿಯು ಈಗ ಬಿಳಗಿ ಗ್ರಾಮದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಮೃತ 1 ನೇ ಪ್ರತಿವಾದಿ ನನ್ನ ಸಂಬಂಧಿಕ ಎಂದರೆ ಸರಿ. ಮಹಾದೇವ ಈತನಿಗೆ ಮದುವೆಯಾಗಿರುವುದಿಲ್ಲ ಮತ್ತು ಆತನ ಆಸ್ತಿಯನ್ನು ಎತ್ತಿಹಾಕಬೇಕೆನ್ನುವ ದುರುದ್ದೇಶದಿಂದ ಮಹಾದೇವನ ಜೊತೆ ವಾದಿಯ ಮದುವೆಯಾಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆಯ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರು ಸಹ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯಾಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

-2-

**<u>ಮರು ವಿಚಾರಣೆ: ಇಲ್ಲ:</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಸಹಿ/–

ಜೆ.ಎಂ.ಎಫ್.ಸಿ. ನ್ಯಾಯಾಲಯ

ಇಂಡಿ.